ಸಿಸಿ 283/2016

ಪಿ.ಡಬ್ಲ್ಯೂ.1

ದಿನಾಂಕಃ29.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಆರ್.ಎಮ್. ವಕೀಲರಿಂದ

ದಿಃ18.08.2014 ರಂದು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಅಫಜಲಪೂರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಗ್ರಾಮದ ಮಟ್ಟದಲ್ಲಿ ಪಿ.ಡಿ.ಓ. ರವರು ತಯಾರಿಸುತ್ತಾರೆ. ಯೋಜನೆಯನ್ನು ತಯಾರಿಸಿದ ನಂತರ ಅನುಮೊದನೆಗಾಗಿ ತಾಲೂಕು ಪಂಚಾಯಿತಿಗೆ ಕಳುಹಿಸುತ್ತಾರೆ, ನಂತರ ಜಿಲ್ಲಾ ಪಂಚಾಯಿತಿಗೆ ಕಳುಸುತ್ತಾರೆ. ಜಿಲ್ಲಾ ಪಂಚಾಯಿತಿಯಿಂದ ಅನುಮೊದನೆಯಾದ ನಂತರ ರಾಜ್ಯ ಮಟ್ಟಕ್ಕೆ ಕಳುಸುವುದಿಲ್ಲ. ಕೇಂದ್ರ ಸರಕಾರಿದಿಂದ ಯೋಜನೆಗೆ ಬರುವ ಹಣ ಗ್ರಾಮೀಣ ಅಭಿವೃದ್ದಿಯ ಆಯುಕ್ತರ ಖಾತೆಯಲ್ಲಿ ಇರುತ್ತದೆ. ಆಯುಕ್ತರ ಕಚೇರಿಗೆ ಹಣವನ್ನು ಬಿಡುಗಡೆಗೊಳಿಸುವ ಬಗ್ಗೆ ಮಾಹಿತಿ ಹೋಗಿರುವ ವಿಚಾರ ನನಗೆ ಗೊತ್ತಿಲ್ಲ. ಕ್ರಿಯಾ ಯೋಜನೆ ಅನುಮೊದನೆಗೊಂಡ ನಂತರ ಯೋಜನೆಯನ್ನು ಕಾರ್ಯಗತಗೊಳಿಸಲು ಕೈಗೆತ್ತಿಕೊಳ್ಳಬೇಕು ಎಂದರೆ ಸರಿ. ಪಿ.ಡಿ.ಓ. ಹಾಗೂ ತಾಲೂಕು ಪಂಚಾಯಿತಿ ಅಧ್ಯಕ್ಷರಿಗೆ ತಾಂತ್ರಿಕ ವ್ಯಕ್ತಿಯಾಗಿ ಕಿರಿಯ ಅಭಿಯಂತರರು ಇರುತ್ತಾರೆ. ಯೋಜನೆಯನ್ನು ಅನುಷಾನಗೊಳಿಸುವಾಗ ಬೇರೆ ಬೇರೆ ಗುತ್ತಿಗೆದಾರರು ಹಾಗೂ ಕಾಮಗಾರಿ ಬೇಕಾಗಿರುವ ಸಾಮಗ್ರಿ ಸಲಕರಣೆಗಳ ಪುರೈಕೆಗಾಗಿ ಆದೇಶವನ್ನು ನೀಡುತ್ತಾರೆ ಎಂದರೆ ಸರಿ. ಸದರಿ ಸಾಮಗ್ರಿಗಳ ಪೂರೈಕೆದಾರರು ಹಾಗೂ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಗಣಕಿಕೃತಗೊಳಿಸಿ ಅನುಮೊದನೆಗೆ ಕಳುಹಿಸುತ್ತಾರೆ. ಅನುಮೊದನೆಗೊಂಡ ನಂತರ ಕಿರಿಯ ಅಭೀಯಂತರರು ಪರಿಶೀಲನೆ ಮಾಡಿದ ನಂತರ ಹಣವನ್ನು ವರ್ಗಾವಣೆ ಮಾಡಲು ನಾವು ಕಾಯ್ದಿರಿಸುತ್ತೇವೆ. ನಂತರ ಜಿಲ್ಲಾ ಪಂಚಾಯಿತಿಗೆ ಹಣವನ್ನು ಕಾಯ್ದಿರಿಸಲು ಕೋರುತ್ತಾರೆ ಎಂದರೆ ಗೊತ್ತಿಲ್ಲ.

ಪಂಚಾಯಿತಿಯಿಂದ ನಿರ್ವಹಿಸಿದಂತಹ ಕಾರ್ಯಗಳ ಅನುಮೊದನೆಗಾಗಿ ಪಂಚಾಯಿತಿಯ ಅಧ್ಯಕ್ಷರು ಹಾಗೂ ಪಿ.ಡಿ.ಓ.ದಿಂದ ಡಿಜಿಟಲ ಸಹಿಯನ್ನು ಮಾಡಿ ಕಳುಹಿಸುತ್ತಾರೆ ಎಂದರೆ ಗೊತ್ತಿಲ್ಲ. ನಾನು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಾಹಣೆ ಮಾಡುವಾಗ ಯಾವುದೇ ಅವ್ಯವಹಾರಗಳು ನನ್ನ ಗಮನಕ್ಕೆ ಬಂದಿರುವುದಿಲ್ಲ. ನನ್ನ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ನಾನು

ಆರೋಪಿತರ ವಿರುದ್ದ ದಾಖಲಾತಿಗಳ ಆಧಾರ ಮೇರೆಗೆ ದೂರು ದಾಖಲಿರುತ್ತೇನೆ. ಎಫ್.ಟಿ.ಒ. ದಾಖಲೆಯ ಆಧಾರದ ಮೇಲೆ ನಾನು ದೂರು ದಾಖಲಿಸಿರುತ್ತೇನೆ. ಎಫ್.ಟಿ.ಒ. ಜಿಲ್ಲಾ ಪಂಚಾಯಿತಿಯವರು ಮಾಡುತ್ತಾರೆ. ದಾಖಲೆಗಳನ್ನು ನೋಡಿದ ನಂತರ ಜಿಲ್ಲಾ ಪಂಚಾಯಿತಿಯವರು ಎಫ್.ಟಿ.ಒ. ಆದೇಶ ಮಾಡುತ್ತಾರೆ.

ನನ್ನ ಮೇಲಾಧಿಕಾರಿಗಳು 1 ನೇ ಆರೋಪಿತನು ಅಪರಾಧ ಮಾಡಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ. 1 ನೇ ಆರೋಪಿತ ಗೌರ ಬಿ. ಗ್ರಾಮ ಪಂಚಾಯಿತಿಯ ಪ್ರಭಾರ ಪಿ.ಡಿ.ಒ. ಆಗಿದ್ದ ಎಂದರೆ ಸರಿ. ಇವರು ಮೂಲ ಕರಜಗಿಯ ಪಿ.ಡಿ.ಒ. ಆಗಿದ್ದರು. 1 ನೇ ಆರೋಪಿಯು ಸಿಗದ ಕಾರಣ ದಾಖಲೆಗಳನ್ನು ಒದಗಿಸಲು ದಿಃ05.09.2014 ರಂದು ನೋಟಿಸನ್ನು ಅವರಿಗೆ ನೀಡಿರುತ್ತೇನೆ. ದಿಃ 28.08.2014 ರಂದು 1 ನೇ ಆರೋಪಿತನು ತನ್ನ ಪ್ರಭಾರಿಯನ್ನು ಬಿಡುಗಡೆಗೊಳಿಸಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. 1 ನೇ ಆರೋಪಿತನ ತನ್ನ ಪ್ರಭಾರಿಯನ್ನು ಬಿಡುಗಡೆಗೊಳಿಸುವ ಒಂದು ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಅವರು ಅದನ್ನು ಸಾಕ್ಷಿಯು ಒಪ್ಪಿರುವುದಿಲ್ಲ.

20.05.2015 ರಂದು ನಾನು ಅಫಜಲಪೂರ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುವುದಿಲ್ಲ. ಆ ಸಮಯದಲ್ಲಿ ಆ ಕಚೇರಿಯ ಮ್ಯಾನೇಜರ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಯು ತನ್ನ ಪ್ರಭಾರಿ ಕಾರ್ಯವನ್ನು ಹಸ್ತಾಂತರ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ತಂದಿರುವುದಿಲ್ಲ. 1 ನೇ ಆರೋಪಿಯ ಪ್ರಭಾರಿ ಕಾರ್ಯವನ್ನು ಹಸ್ತಾಂತರಿಸುವ ಬಗೆ ಮಾಡಿರುವ ಅಧಿಕೃತ ಜ್ಞಾಪನ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅವರು ಒಪ್ಪಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಪಿ-7 ರ ದಾಖಲೆಯನ್ನು ವಿವರವಾಗಿ ಪರಿಶೀಲಿಸಿಲ್ಲ. ಮೇಲಾಧಿಕಾರಿಗಳು ಕಳುಹಿಸಿದ ದಾಖಲೆಗಳನ್ನು ಅವರ ಸೂಚನೆಯ ಮೇರೆಗೆ ನಾನು ದೂರಿನ ಜೊತೆಯಲ್ಲಿ ಪೊಲೀಸ ಠಾಣೆಗೆ ನೀಡಿರುತ್ತೇನೆ. 1 ನೇ ಆರೋಪಿ ಅವ್ಯವಹಾರ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ